‘‘ಮಕ್ಕಳು ಫೋಟೊ ತೆಗೆಸಿಕೊಂಡರೇನಂತೆ?...’’

‘‘ಶೀ... ನನಗೆ ನಾಚಿಕೆಯಾಗತ್ತೆ...’’

ಹಾಗೆ ಹೇಳುವಾಗ ಅವಳ ಮುಖ ಕೆಂಪೇರಿತು. ಉಳಿದ ಮಕ್ಕಳಿಂದ ಸ್ವಲ್ಪ ದೂರ ಸರಿದು ಚಿಕ್ಕಪುಟ್ಟ ವಿಚಾರಗಳ ಬಗ್ಗೆ ಮಾತನಾಡುತ್ತಾ ರಸ್ತೆಯ ಒಂದು ಕಡೆಯಿಂದ ಮನೆಯ ಕಡೆಗೆ ಹೆಜ್ಜೆ ಹಾಕಿದರು. ಅವಳ ಮನೆ ಕಳೆದು, ಪೋಸ್ಟಾಫೀಸು ಕಳೆದು ಮತ್ತೂ ಐದು ನಿಮಿಷ ನಡೆದ ಅನಂತರವಷ್ಟೆ ಅವನ ಮನೆ ಸಿಗೋದು. ‘‘ನನಗೆ ಒಪ್ಪಿಗೆ...’’ ಮನೆ ತಲುಪುತ್ತಿದ್ದಂತೆ ಅವಳು ಹೇಳಿದಳು: ‘‘ನಾಳೆಯೇ ತೆಗಿಸೋಣ...’’

‘‘ನಿನ್ನ ಹತ್ರ ಹಣ ಇದೆಯಾ?...’’

‘‘ಹಣ ಯಾಕೆ?...’’

‘‘ಹಣ ಇಲ್ದೆ ಯಾರಾದರೂ ಸುಮ್ಮನೆ ಫೋಟೊ ತೆಗಿತಾರಾ?...’’

ಅವರು ಸ್ವಲ್ಪ ಹೊತ್ತು ಮಾತನಾಡದೆ ನಡೆದರು. ಅಪ್ಪನ ಹತ್ತಿರವಾಗಲೀ ಅಮ್ಮನ ಹತ್ತಿರವಾಗಲೀ ಹಣ ಕೇಳೋದಿಕ್ಕೆ ಅವನಿಗೆ ಧೈರ್ಯವಿಲ್ಲ. ಬೆಳಗ್ಗೆ ಹಾಲಿನವ ಹಣಕ್ಕೆ ಬಂದಾಗ ಅಪ್ಪ ಅಮ್ಮನಿಗೆ ಹೇಳಿದ್ದನ್ನು ಅವನು ಕೇಳಿಸ್ಕೊಂಡಿದ್ದ.

‘‘ಇಷ್ಟೊಂದು ಹಾಲು ಯಾಕೆ ಬೇಕು?... ಇನ್ಸೂರೆನ್ಸಿನ ಪ್ರೀಮಿಯಂ ಕಟ್ಟಬೇಕು. ಕರೆಂಟು ಬಿಲ್ಲು ಕಟ್ಟಬೇಕು. ನನ್ನ ಕೈಯಲ್ಲಿ ಆಗೋದಿಲ್ಲ... ನಾನು ಎಲ್ಲಿಗಾದರೂ ಹೋಗಿಬಿಡ್ತಿನಿ...’’

ನಡೆದು ನಡೆದು ಅವರು ಅವಳ ಮನೆ ಮುಂಭಾಗಕ್ಕೆ ಬಂದು ಸೇರಿದರು.

‘‘ನಿನ್ನ ಅಪ್ಪನ ಹತ್ತಿರ ಕೇಳಿನೋಡು...’’ ಅವನು ಹೇಳಿದ: ‘‘ನಿನ್ನ ಅಪ್ಪನ ಹತ್ತಿರ ತುಂಬಾ ಹಣ ಇರಬೇಕಲ್ವಾ?... ಸ್ಕೂಟರಿನಲ್ಲಿ ತಾನೆ ಆಫೀಸಿಗೆ ಹೋಗೋದು?...’’

ಭಾರವಾದ ಪುಸ್ತಕದ ಚೀಲವನ್ನು ಹೊತ್ತು ಬೇಲಿ ದಾಟಿ ಮನೆಗೆ ಹೋದಳು. ಬೇಲಿಯ ಮೇಲೆ ಬಿಳಿ ಲಂಟಾನ ಹೂಗಳು ಅರಳಿ ನಗುತ್ತಿದ್ದವು. ಆ ಲಂಟಾನ ಹೂಗಳು ಬಹಳ ಇಷ್ಟವಾದರೂ ಅವಳು ಬೇಲಿಯ ಹತ್ತಿರ ಹೋಗಿ ನಿಲ್ಲುತ್ತಿರಲಿಲ್ಲ. ಲಂಟಾನ ಗಿಡಗಳಿರುವ ಕಡೆಗಳಲ್ಲಿ ಹಾರಿ ಕುಕ್ಕುವ ಹಾವುಗಳಿರುತ್ತವೆಯೆಂದು ಅವನು ಅವಳಿಗೆ ಹೇಳಿದ್ದ.

ಅಪ್ಪನ ಹತ್ತಿರವಾಗಲೀ ಅಮ್ಮನ ಹತ್ತಿರವಾಗಲೀ ಹಣ ಕೇಳುವ ಧೈರ್ಯ ತೋರಿಸಲಿಲ್ಲ. ಹಣ ಕೇಳಿದರೆ, ಒಂದು ನೂರು ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗತ್ತೆ. ಅವಳದ್ದೇ ಆದ ಒಂದು ಪಿಗ್ಗಿ ಬ್ಯಾಂಕಿದೆ (ಹಂದಿಯಾಕರದ ಗೋಲಕ). ಅದನ್ನು ತೆಗಿಸಿಕೊಡುವಾಗ ಅವಳ ತಂದೆ, ‘ಇದು ತುಂಬಿದರೆ, ನೀನಿದನ್ನು ತೆರೆದು ಹಣ ತೆಗೆದುಕೊಂಡು, ನಿನಗಿಷ್ಟವಾದದ್ದನ್ನು ತೆಗೆದುಕೊಳ್ಳಬಹುದು’ ಅಂತ ಹೇಳಿದ್ದರು. ಆದರೆ, ಎಷ್ಟೇ ಹಣ ಹಾಕಿದ್ರು, ಅದು ಒಮ್ಮೆ ಸಹ ತುಂಬಿದ್ದು ಕಾಣಲೇ ಇಲ್ಲ. ಆದರೆ, ಅದರ ರಹಸ್ಯವನ್ನು ಒಮ್ಮೆ ಅವಳು ಕಂಡು ಹಿಡಿದುಬಿಟ್ಟಿದ್ದಳು. ಅಮ್ಮ ತೆಂಗಿನ ಗರಿಯ ಕಡ್ಡಿಯಿಂದ ಪಿಗ್ಗಿಬ್ಯಾಂಕಿನಿಂದ ನಾಣ್ಯಗಳನ್ನು ಯಾರಿಗೂ ಗೊತ್ತಾಗದ ಹಾಗೆ, ತೆಗೆಯುವುದನ್ನು ಅವಳು ನೋಡಿಬಿಟ್ಟಿದ್ದಳು. ಈಗ ಅವಳು ಸಹ ಅದನ್ನೇ ಮಾಡಬೇಕೂಂತ ತೀರ್ಮಾನಿಸಿದಳು. ಯಾರಿಗೂ ಗೊತ್ತಾಗದ ಹಾಗೆ, ಹೋಮ್‌ವರ್ಕ್ ಮಾಡುವುದರ ನಡುವೆ ಅವಳು ಪಿಗ್ಗಿಬ್ಯಾಂಕನ್ನು ತನ್ನ ವಶಕ್ಕೆ ತೆಗೆದುಕೊಂಡಳು. ಅದಕ್ಕೆ ತೂಕವೇ ಇಲ್ಲವೆಂದು ಅನಿಸಿತು. ಅದು ಪೂರ್ತಿಯಾಗಿ ಖಾಲಿಯಾಗಿಲ್ಲ ಅನ್ನುವುದನ್ನು ಖಾತ್ರಿಗೊಳಿಸಲು, ಅದನ್ನೊಮ್ಮೆ ಕುಲುಕಿ ನೋಡಿದಳು. ಆ ಕುಲುಕಾಟಕ್ಕೆ ಒಂದು ಸಣ್ಣ ಶಬ್ದ ಇದ್ದದ್ದು ಕೇಳಿಸಿತು. ಬಹಳ ಹೊತ್ತಿನಿಂದ ತೆಂಗಿನಗರಿಯ ಕಡ್ಡಿಯಿಂದ ಪ್ರಯತ್ನಿಸಿದ ಅನಂತರ ಸಿಕ್ಕಿದ ನಾಣ್ಯಗಳನ್ನು ಅವಳು ಯಾರಿಗೂ ಗೊತ್ತಾಗದ ಹಾಗೆ, ಶಾಲೆಯ ಚೀಲದಲ್ಲಿ ಜಾಗ್ರತೆಯಿಂದ ತೆಗೆದಿಟ್ಟಳು.